## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 22 / 2022

ಸಿಡಬ್ಲ್ಯೂ- **07**
ಪಿಡಬ್ಲ್ಯೂ-**05**

ದಿನಾಂಕಃ **06.06.2026.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಹಣಮಂತ್ರಾಯ |
| ತಂದೆಯ/ಗಂಡನ ಹೆಸರುಃ | - | ಚಂದಪ್ಪ ಕರಡಿ |
| ವಯಸ್ಸುಃ | - | **42** ವರ್ಷ |
| ಉದ್ಯೋಗಃ | - | ಖಾಸಗಿ ಕೆಲಸ |
| ವಾಸಸ್ಥಳಃ | - | ವಿವೇಕನಂದ ಕಾಲೋನಿ ಯಾದಗಿರಿ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

2017 ರಿಂದ 2025ರ ವರೇಗೆ ಮಕ್ಕಳ ಕಲ್ಯಾಣ ಸಮಿತಿ ಬಾಲಕಿಯರ ಬಾಲ್ಯ ಮಂದಿರ ಯಾದಗಿರಿಯಲ್ಲಿ ನಾನು ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ-1,4 ರಿಂದ 6 ಮತ್ತು 8 ರಿಂದ 12 ರವರ ಪರಿಚಯ ನನಗೆ ಇರುತ್ತದೆ. ಜುಲೈ 19, 2020 ರಂದು ಬಾಲ್ಯ ವಿವಾಹ ಪ್ರಕರಣದ ಕುರಿತು ಮಕ್ಕಳ ಸಹಾಯವಾಣಿಗೆ ಒಂದು ಕರೆ ಬಂದಿತ್ತು. ದಿನಾಂಕಃ 21.07.2020 ರಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಯಾದ ಗೋವಿಂದ ರಾಠೋಡ, ಅಂಗನವಾಡಿ ಕಾರ್ಯಕರ್ತೆ ಯಾದ ಚಾಸಾ-6ರವರು, ಚಾಸಾ-5 ರವರು ಸದರಿ ಮಗುವನ್ನು ಬಾಲ್ಯ ವಿವಾಹದಿಂದ ರಕ್ಷಿಸಿ ಸರಕಾರಿ ಬಾಲಕಿಯರ ಬಾಲ್ಯ ಮಂದಿರದಲ್ಲಿ ರಕ್ಷಣೆಗಾಗಿ ಬಿಟ್ಟಿದ್ದರು ಮತ್ತು ಜಿಲ್ಲಾ ಮಕ್ಕಳು ಕಲ್ಯಾಣ ಸಮಿತಿಯು ಆ ಮಗುವನ್ನು ಸ್ವಾಗತ ಘಟಕದಲ್ಲಿ ದಾಖಲಿಸಿಕೊಂಡಿದರು. ನಂತರ ಮಗುವಿಗೆ ಆಪ್ತ ಸಮಾಲೋಚನೆ ಮಾಡಿ ವರದಿ ಸಲ್ಲಿಸುವಂತೆ ಆಪ್ತ ಸಮಾಲೋಚನೆಯವರಿಗೆ ಆದೇಶ ಮಾಡಿದ್ದು.

ಸದರಿ ಮಗುವು ಅಂದರೆ ಚಾಸಾ-12ರವರು ಸಮಿತಿಯ ಮುಂದೆ ಹಾಜರಾಗಿದ್ದಾಗ ಅವಳ ಕೋರಳಲ್ಲಿ ತಾಳಿ, ಕಾಲು ಉಂಗರ ಇವುಗಳನ್ನು ಇರುವುದನ್ನು ಸಮಿತಿಯು ಗಮಸಿರುತ್ತದೆ. ಕರೋನಾ ಸಂಕ್ರಾಮಿಕ ರೋಗ ಹರಡುತ್ತಿದ್ದ ಕಾರಣ ಸಮಿತಿಯು ಪ್ರತ್ಯೇಕ್ಷವಾಗಿ ವಿಚಾರಣೆ ಮಾಡುತ್ತಿರಲ್ಲಿ ಆದರೆ ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ ಮಾಡುತ್ತಿದ್ದರು ಮುಂದೆ ದಿನಾಂಕಃ 04.10.2020 ರಂದು ಆಪ್ತ ಸಮಾಲೋಚನೆಯ ವರದಿಯನ್ನು ಆಧಾರಿಸಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಈ ಸದರಿ ಮಗುವಿನ ಬಾಲ್ಯ ವಿವಾಹ ಮಾಡಿದ ಅವರ ತಂದೆ-ತಾಯಿಯವರ ವಿರುದ್ಧ ಬಾಲ್ಯ ವಿವಾಹ ನಿಷೇಧ ಕಾಯ್ದೆ ಅನ್ವಯ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳಬೇಕೆಂದು

ಆದೇಶ ಮಾಡಿದ್ದೇವು. ನಂತರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರು ಬಾಲ್ಯ ವಿವಾಹ ಮಾಡಿದ ಮಗುವಿನ ತಂದೆ-ತಾಯಿ ಹಾಗೂ ಹುಡುಗನ ತಂದೆ-ತಾಯಿಯವರ ವಿರುದ್ಧ ದೂರನ್ನು ನೀಡಿದರು. ಚಾಸಾ-12 ರವರ ತಾಯಿಯ ಹೆಸರು ಚನ್ನಬಸಮ್ಮ ಅವರು 4 ನೇ ಆರೋಪಿ ಇರುತ್ತಾರೆ. 1 ನೇ ಆರೋಪಿಯು ವರ ಇದ್ದನ್ನು. 1 ನೇ ಆರೋಪಿಯ ತಂದೆ-ತಾಯಿಯವರ ಹೆಸರು ನನಗೆ ಗೊತ್ತಿರುವುದಿಲ್ಲ ಹಾಗೂ ಅವರನ್ನು ನಾನು ನೋಡಿರುವುದಿಲ್ಲ. ಚಾಸಾ-12 ಹಾಗೂ ಅವಳ ತಾಯಿಯನ್ನು ನಾನು ನೋಡಿರುತ್ತೇನೆ. 1 ರಿಂದ 3 ನೇ ಆರೋಪಿತರು ಹಾಜರಿರುತ್ತಾರೆ ಆದರೆ 4 ನೇ ಆರೋಪಿ ಹಾಜರಿರುವುದಿಲ್ಲ. ಚಾಸಾ-12 ರವರ ತಾಯಿಯನ್ನು ಗುರುತಿಸಲು ಆರೋಪಿತರ ಪರ ವಕೀಲರು ತಕರಾರು ಮಾಡಿರುವುದಿಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ.ಆರ್.ಕೆ. ರವರಿಂದಃ</u>

ದಿನಾಂಕಃ 21.07.2020 ರಂದು ಚಾಸಾ-12 ರವರನ್ನು ರಾತ್ರಿ ಕರೆದುಕೊಂಡು ಬಂದಿದ್ದರು ಆದರೆ ಆವಾಗ ಎಷ್ಟು ಸಮಯ ಆಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಬೆಳಗ್ಗೆ ಬಾಲಕಿ ಮತ್ತು ಅವಳ ತಾಯಿಯನ್ನು ನೋಡಿದೆ ಆವಾಗ ಕರೋನಾ ಸಂಕ್ರಾಮಿಕ ರೋಗ ಹರಡುತ್ತಿದ್ದ ಕಾರಣ ಯಾರನ್ನು ಸಹ ಬಾಲ್ಯ ಮಂದಿರದಲ್ಲಿ ಪ್ರವೇಶಿಸಲು ಅನುಮತಿ ನೀಡುತ್ತಿರಲಿಲ್ಲ ಎಂದು ಹೇಳುತ್ತಾರೆ. ದಿನಾಂಕಃ 21.07.2020 ರಂದು ಚಾಸಾ-12 ರವರನ್ನು ಸ್ವಾಗತ ಘಟಕದಲ್ಲಿ ಸೇಪರ್ಡೆ ಮಾಡಿಕೊಂಡೇವು. ದಿನಾಂಕಃ 20.07.2020 ರಂದು ರಾತ್ರಿ ಸಮಯದಲ್ಲಿ ಮಗು ಎಲ್ಲಿ ವಾಸವಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಮಗುವನ್ನು ಆಪ್ತ ಸಮಾಲೋಚನೆ ಮಾಡಿ ವರದಿ ನೀಡಬೇಕೆಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರಿಗೆ ಆದೇಶ ಮಾಡಿದ ದಿನಾಂಕ ನನಗೆ ಗೊತ್ತಿರುವುದಿಲ್ಲ. ದಿನಾಂಕಃ 13.10.2020 ರಂದು ಪ್ರ.ವ.ವರದಿಯನ್ನು ದಾಖಲಿಸಬೇಕೆಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರಿಗೆ ಆದೇಶ ಮಾಡಿದೆ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಚಾಸಾ-12 ರವರ ಕೊರಳಲಿ ತಾಳಿ ಮತ್ತು ಕಾಲು ಉಂಗರ ಇರುವದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ.1 ನೇಆರೋಪಿ ಹಾಗೂ ಚಾಸಾ-12 ರವರ ನಡುವೆ ಬಾಲ್ಯ ವಿವಾಹ ಆಗದಿದ್ದರೂ ಸಹ ನಾನು ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಗೊತ್ತು ಇರದಿದ್ದರು ಸಹ ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.